ಮಹಾರಾಣಿ, ಪ್ರಭುಗಳು ಮೃಗಯಾ ವಿಹಾರದಿಂದ ಬಂದಿರುವರು. ಅವರ ಅಂತಃಪುರದಲ್ಲಿ ವಿಶ್ರಮಿಸುತ್ತಿರುವವರಂತೆ ಹಂಸಿನಿ ವಿನಮ್ರವಾಗಿ ಮಾಡಿಕೊಂಡ ಅರಿಕೆ ನನ್ನ ಕಿವಿಗಳಿಗೆ ಬೀಳುತ್ತಲೇ ನನ್ನೊಳಗೊಂದು ಸಂಚಲನವುಂಟಾಗಿ... ಅಯಾಚಿತವಾಗಿ ಮುಗುಳ್ನಗುವೊಂದು ಮೊಗದಲ್ಲಿ ಮೂಡಿತು.

ಮಹಾರಾಣಿಯವರ ಮುಖ ಮಂಡಲ ಪೌರ್ಣಮಿಯ ಚಂದ್ರನಂತಾಯಿತು ಎಂದವಳ ಮಾತಿಗೆ ಅರೆನಾಚುತ್ತಾ...

'ಈ ಹಾಸಿಗೆಯ ಮೇಲ್ಹಾಸನ್ನು ಬದಲಿಸು. ಅವರಿಗೆ ಪ್ರಿಯವಾದ ಶ್ವೇತವರ್ಣದ ರೇಶಿಮೆಯ ಹಾಸನ್ನೇ ಹಾಸು' ಎಂದೆ. ಅವಳೂ ಅರ್ಥಗರ್ಭಿತವಾಗಿ ನಗುತ್ತಾ–

'ಹೂಂ. ಅರಿಕೆಯಾಯಿತು. ರಾಣಿಯವರು ಮುಡಿಯಲು ಮಲ್ಲಿಗೆಯ ಕೈದಂಡೆಯೇ ತಯಾರಾಗುತ್ತಿದೆ. ನಾನೇ ಕೇಶ ಸಿಂಗಾರ ಮಾಡಿ ಮುಡಿಸುವೆ' ಎಂದಳು.

ಬೆಳ್ಳನೆಯ ಹಾಲು ಬೆಳದಿಂಗಳ ರಾತ್ರಿ. ಕಿಟಕಿಯ ಸರಳುಗಳಿಂದ ಯಥೇಚ್ಛವಾಗಿ ಒಳಬರುತ್ತಿದ್ದ ತಿಂಗಳು... ತೀವ್ರ ಅಭೀಪ್ಸೆಯಿಂದ ಕಾಯುತ್ತಿದ್ದ ನಾನು... ಹದಿನೈದು ದಿನಗಳ ದೀರ್ಘ ವಿರಹದ ಮೇಲೆ ನಮ್ಮಿಬ್ಬರಿಗೂ ಸಿಗುವ ಏಕಾಂತ ಸುಖದ ಕನಸಿನಲ್ಲಿ ಮೈಮರೆತು ಕುಳಿತಿದ್ದೆ. ಅವರಿಗಾಗಿ ತರಿಸಿದ್ದ ಸುಖೋಷ್ಣವಾದ ಹಾಲೂ ಆರಿ ಕೆನೆಗಟ್ಟತೊಡಗಿತ್ತು. ತೀರದ ನಿರೀಕ್ಷೆ ಆಕಾಂಕ್ಷೆಗಳಿಂದ ಕಾಯುತ್ತಾ ಬೇಯುತ್ತಾ...

ಕ್ಷಮಿಸಬೇಕು ಲಕ್ಷಣಾದೇವಿಯವರು. ಈ ದಿನ ಪ್ರಭುಗಳು ಹಂಸಪದಿಕೆಯ ಸಜ್ಜೆಗೆ ಹೋದರಂತೆ ವಜ್ರಾಯುಧದ ಪ್ರಹಾರದಂತಹ ಆ ಮಾತಿನಿಂದ ತತ್ತರಿಸಿದೆ. ಯಾಕೆ? ಎಂದೂ ಇಲ್ಲದ ಈ ಪರಿ... ಬೇರೆ ನಾಲ್ಕು ರಾಣಿಯರು ಇರುವುದು ಹೊಸದೇನಲ್ಲ. ಆ ಎಲ್ಲರಿಗಿಂತ ನಾನೇ ಪ್ರಿಯಳೆಂದು ಅದೆಷ್ಟು ಬಾರಿ ಹೇಳಿಲ್ಲ. ನನ್ನ ಮುಖವನ್ನು ಬೊಗಸೆಯಲ್ಲಿ ತೆಗೆದುಕೊಂಡು ಮುದ್ದಿಸಿ ಮುದ್ದಿಸಿ ನನ್ನ ಪಟ್ಟದರಸಿಯೂ ನೀನೆ ಹೃದಯದರಸಿಯೂ ನೀನೆ ಎಂದಾಗಲೆಲ್ಲ ನಾನದೆಷ್ಟು ಉಬ್ಬಿ ಉಬ್ಬಿ ಹೋಗುತ್ತಿರಲಿಲ್ಲ... ಹೀಗೆ ಮೃಗಯಾ ವಿಹಾರಕ್ಕೋ ದಂಡಯಾತ್ರೆಗೋ ಹೋಗಿ ಬಂದರಂತೂ ತೀರಿತು. ಮಧುಚಂದ್ರದ ಮೊದಲಿರುಳಂತೆ ನನ್ನನ್ನು ಕಾಡಿ ಕೂಡಿ... ಇಡೀ ಇರುಳು ಒಂದು ಸಂಭ್ರಮವಾಗುವಂತೆ ನಲಿವಿಗೆ ರೆಕ್ಕೆ ಬಂದಂತೆ... ಇಂತಹ ಉತ್ಕೃಷ್ಟ ಸಮಾಗಮ ಇನ್ನೆಲ್ಲಿಯೂ ಇರಲಾರದೆನ್ನಿಸುವಂತೆ... ಈಗ... ಈ ದಿನ, ಇಷ್ಟು ದಿನಗಳ ಮೇಲೆ ನನ್ನನ್ನಲ್ಲದೆ ಅವಳ ಹಾಸಿಗೆಗೆ ನಡೆದು ಬಿಟ್ಟರೆಂದರೆ... ಎದೆಯಲ್ಲಿ ನೆಟ್ಟ ದಬ್ಬಳವೊಂದು ನಿರಂತರ ನೋವುಂಟು ಮಾಡಿ ಹಲುಬುವಂತೆ... ನಿದ್ರೆಯಿಲ್ಲದೆ ನಿಡುಸುಯ್ಯುತ್ತಾ... ಮರುದಿನವೂ ಬರಲಿಲ್ಲ. ಮೂರನೆಯ ದಿನ ತಡೆಯಲಾಗಲಿಲ್ಲ. ನಾನೇ ಹೇಳಿ ಕಳುಹಿಸಿದೆ. ರಾಜಕಾರ್ಯದ ನೆವವೊಡ್ಡಿ ತುಸು ತಡವಾಗೇ ಬಂದರು. ಶಿಷ್ಟಾಚಾರದ ನಾಲ್ಕು ಮಾತಾಡಿ ಆಯಾಸ ನಿದ್ರೆಯಾವರಿಸುತ್ತಿದೆ ಎಂದರು. ನಾನೇ ಮೇಲಾಗಿ ರತಿಗೆಳೆಯಲು ಆತ್ಮಾಭಿಮಾನ ಅಡ್ಡ ಬಂತು. ಮರುದಿನವೂ ಬಂದರು. ಆ ದಿನ ಹತ್ತಿರ ಬಂದರೂ ಮೊದಲಿನ ಉಲ್ಲಾಸವಿಲ್ಲ. ಅವಸರದ ವಿಧಿ... ಸಂಶಯದ ಕಿಡಿಗಳು

